ಇಂದು ದಿನಾಂಕಃ 25-05-2023 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ವಿ.ಹೆಚ್.ಆರ್. ವಕೀಲರಿಂದಃ-

ನನ್ನ ತಂದೆಗೆ ನಾಲ್ಕು ಜನ ಮಕ್ಕಳು. ಅವರ ಹೆಸರು ಶಫಿಯೋದ್ದಿನ್, ಸೈನೋದ್ದಿನ್, ಸೈಯದ ಕರೀಮ ಮತ್ತು ನಾನು ಅವರಲ್ಲಿ ಶಫಿಯೋದ್ದಿನ್ ಮತ್ತು ಸೈನೋದ್ದಿನ್ ಮೃತಪಟ್ಟಿರುತ್ತಾರೆ. ಶಫಿಯೋದ್ದಿನ್ ಮದುವೆಯಾಗದೆ ಮೃತಪಟ್ಟಿರುತ್ತಾನೆ ಹಾಗೂ ಸೈನೋದ್ದಿನ್‌ರವರಿಗೆ ಒಬ್ಬಳು ಹೆಂಡತಿ ಇರುತ್ತಾಳೆ. ನನ್ನ ತಂದೆ-ತಾಯಿಯವರು ಮೃತಪಟ್ಟಿದ್ದಾರೆ. ದಾವಾ ಆಸ್ತಿ ನನ್ನ ಹಿರಿಯರ ಆಸ್ತಿ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಎರಡು ಭಾಗ ಮಾಡಿ ಒಂದು ಭಾಗದಲ್ಲಿ ನನ್ನ ಅಣ್ಣನ ಹೆಂಡತಿಯಾದ ಜಾಹೇದಾಬೇಗಂ ಮತ್ತು ಇನ್ನೊಂದು ಭಾಗದಲ್ಲಿ ನಾನು ಹಾಗೂ ನನ್ನ ಹೆಂಡತಿ ಇರುತ್ತೇವೆ. ಇದೆ ದಾವಾ ಆಸ್ತಿಯಲ್ಲಿ ಇನ್ನೊಂದು ಭಾಗವನ್ನು ಸೈಯದ ಕರಿಮೋದ್ದಿನರವರು ಬಾಡಿಗೆ ಕೊಟ್ಟಿರುತ್ತಾರೆ.

ದಾವಾ ಆಸ್ತಿಯಲ್ಲಿ ನನ್ನ ತಂದೆಯ ಎಲ್ಲ ಮಕ್ಕಳಿಗೆ ಸಮವಾದ ಹಕ್ಕು ಇದೆ ಎಂದರೆ ಸರಿ. ಪ್ರತಿವಾದಿರವರ ಜೊತೆ ನಾವು ಮಾತು ಬಿಟ್ಟು 1-2 ವರ್ಷಗಳಾಗಿದೆ. ದಾವಾ ಆಸ್ತಿಯ ದಕ್ಷಿಣ ಭಾಗದಲ್ಲಿ ಶೇಕ ಮಹೆಬೂಬಸಾಬ್, ಉಸ್ಮಾನಅಲಿ, ಶೇಕ ಅಹ್ಮದ ರವರ ಆಸ್ತಿ ಇದೆ ಎಂದರೆ ಸರಿ. ಶೇಕ ಮಹೆಬೂಬಸಾಬ್, ಉಸ್ಮಾನಅಲಿ, ಶೇಕ ಅಹ್ಮದ ರವರ ಆಸ್ತಿಗೆ ನನಗೆ ಯಾವದೆ ಸಂಬಂಧ ಇರುವುದಿಲ್ಲ ಎಂದರೆ ಸರಿ.

ಮೇಲೆ ಹೇಳಿರುವ ವ್ಯಕ್ತಿಗಳು 1ನೇ ಪ್ರತಿವಾದಿಗೆ ಅವರ ಆಸ್ತಿಯನ್ನು ದಾನ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಮೇಲೆ ಹೇಳಿರುವ ಆಸ್ತಿಗಳ ದಾಖಲೆಯಲ್ಲಿ 1ನೇ ಪ್ರತಿವಾದಿರವರ ಹೆಸರು ಇದೆ ಎಂದರೆ ಸಾಕ್ಷಿ ಅವರ ಆಸ್ತಿ ಅವರು ಯಾರಿಗಾದರೂ ಕೊಡಬಹುದು ಎಂದು ನುಡಿಯುತ್ತಾರೆ.

ಶೇಕ ಮಹೆಬೂಬಸಾಬ್, ಉಸ್ಮಾನಅಲಿ, ಶೇಕ ಅಹ್ಮದ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನಗರಸಭೆ ಅಧಿಕಾರಿಗಳಿಗೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿ ಹಿರಿಯರ ಆಸ್ತಿ ಆಗಿದ ಕಾರಣ ನನ್ನ ಅಣ್ಣ-ತಮ್ಮಂದಿರಿಗೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ನನ್ನ ಆಸ್ತಿಯಲ್ಲಿ ಕಬ್ಜೆ ಮಾಡಿದ ಕಾರಣ

ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿರುವ ಸಂದಿ 1ನೇ ಪ್ರತಿವಾದಿಯದು ಎಂದರೆ ಸರಿಯಲ್ಲ. ಸದರಿ ಸಂದಿ ಒಂದನೆ ಪ್ರತಿವಾದಿಯ ಹೆಸರಿನಲ್ಲಿರುವ ಕಾರಣ ಅವರು ಮನೆ ಕಟ್ಟುತ್ತಿದ್ದಾರೆ ಎಂದರೆ ಸಾಕ್ಷಿ ಆ ಸಂದಿ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ದಾವಾ ಹೂಡುವಗಿಂತ ಮುಂಚೆ 1ನೇ ಪ್ರತಿವಾದಿ ಸದರಿ ಸಂದಿಯಲ್ಲಿ ಮನೆಯನ್ನು ಕಟ್ಟಿದ್ದಾಳೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ನನ್ನ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ಶೇಕ ಮಹೆಬೂಬಸಾಬ್, ಉಸ್ಮಾನಅಲಿ, ಶೇಕ ಅಹ್ಮದ ರವರ ಹೆಸರಿನಲ್ಲಿ ಇದೆ ಎಂದು ಬರೇಸಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ನಮ್ಮ ಆಸ್ತಿಯಲ್ಲಿ ಇದ್ದಾರೆ ಹಾಗೂ ನನ್ನ ಆಸ್ತಿಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಸಂದಿ ಶೇಕ ಮಹೆಬೂಬಸಾಬ್, ಉಸ್ಮಾನಅಲಿ, ಶೇಕ ಅಹ್ಮದ ರವರ ಹೆಸರಿನಲ್ಲಿ ಇದ್ದು ನಂತರ ಅವರು 1ನೇ ಪ್ರತಿವಾದಿಗೆ ದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ನನ್ನ ಆಸ್ತಿಯಲ್ಲಿದ್ದು ಸಂದಿಯಲ್ಲಿ ನೀರು ಹೋಗುತ್ತಿದ್ದು ಹಾಗೂ ಯಾರಿಗೂ ಸಹಿತ ತೊಂದರೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ಖಾಸಗಿ ಆಸ್ತಿ ಅಥವಾ ಸರಕಾರಿ ಆಸ್ತಿಯನ್ನು ಒತ್ತುವರಿ ಮಾಡಿದ್ದರಿಂದ ನಗರಸಭೆ ಅಧಿಕಾರಿಗಳು ಅದನ್ನು ನಿಲ್ಲಿಸುತ್ತಾರೆ ಎಂದರೆ ಸರಿ. ಯಾರಾದರೂ ತಮ್ಮ ಆಸ್ತಿಯಲ್ಲಿ ಮನೆ ಕಟ್ಟಿದರೆ ಹಾಗೂ ಮನೆ ಸುತ್ತಮುತ್ತ ನಾಲಿ ಮಾಡಿಕೊಂಡರೆ ನಗರ ಸಭೆ ಅಧಿಕಾರಿಗಳು ಕೇಳುವುದಿಲ್ಲ ಎಂದರೆ ಸರಿ. ಒತ್ತುವರಿ ಮಾಡಿರುವ ಬಗ್ಗೆ ನಗರಸಭೆ ಅಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಿದ್ದೇನೆ. ನಗರಸಭೆ ಅಧಿಕಾರಿಗಳು ನೋಡಿ ಹೋದರು ಯಾವದೇ ಕ್ರಮವನ್ನು ತೆಗೆದುಕೊಂಡಿಲ್ಲ. ನಾನು ನಗರಸಭೆ ಮೇಲಾಧಿಕಾರಿಗಳಿಗೆ ಯಾವದೇ ಅರ್ಜಿ ಸಲ್ಲಿಸಿಲ್ಲ.

ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ನನ್ನ ಯಾವದೇ ಆಸ್ತಿ ಇಲ್ಲದಿದ್ದರೂ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಶೇಕ ಮಹೆಬೂಬಸಾಬ್, ಉಸ್ಮಾನಅಲಿ, ಶೇಕ ಅಹ್ಮದ ರವರಿಂದ ದಾನ ಪಡೆದುಕೊಂಡು ಅವರ ಆಸ್ತಿಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಸರಕಾರದಿಂದ ಪರಿಹಾರದಿಂದ ತಮ್ಮ ಆಸ್ತಿಯಲ್ಲಿ ಮನೆ ಕಟ್ಟುತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಸಹೋದರರು ದಾವೆ ಹೂಡದಿದ್ದರೂ ಅವರ ಮಾತನ್ನು ಕೇಳದೆ ನಾನು ಈ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಹಿರಿಯರ ಆಸ್ತಿ ಇರುವ ಕಾರಣ ಈ

ದಾವೆಯನ್ನು ಹೂಡಲು ನನಗೆ ಯಾವದೇ ಕಾರಣ ಇಲ್ಲ ಎಂದರೆ ಸಾಕ್ಷಿ ಸದರಿ ಆಸ್ತಿಯಲ್ಲಿ ನನ್ನದು ಸಹ ಭಾಗ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ವಾದಿ ಪತ್ರದಲ್ಲಿ ದಾವಾ ಆಸ್ತಿಯಲ್ಲಿರುವ ನನ್ನ ಭಾಗವನ್ನು ಯಾರಿಂದ ಬಂದಿದೆ ಎಂದು ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ಈ ದಿನ ಸುಳ್ಳು ಶಫಥ ಪತ್ರ ನೀಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**